**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020** **ಅ.ಸಾ. 16**

**ಹೆ.ಸಾ .3**

| | | |
|---|---|---|
| ಸಾಕ್ಷಿದಾರರ ಹೆಸರು | - | ಕಸ್ತೂರಿ ಒಡೆಯರ್ |
| ಗಂಡನ ಹೆಸರು | - | ರವಿ ಹುದಾರ್ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ವೈಜ್ಞಾನಿಕ ಅಧಿಕಾರಿ |
| ವಿಳಾಸ | - | ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಂಗಳೂರು |

**(ವೀಡಿಯೋ ಕಾನ್ಪರೆನ್ಸ್ ಮೂಲಕ)**
ದಿನಾಂಕಃ 04-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ನಾನು 2015 ನೇ ಮಾರ್ಚ್ ತಿಂಗಳಿದಿಂದ ಇಂದಿನವರೆಗೂ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 27-08-2020 ರಂದು ಈ ಪ್ರಕರಣದಲ್ಲಿ 9 ಸೀಲು ಮಾಡಿದ ಸೊತ್ತುಗಳನ್ನು ಮಲ್ಪೆ ಪಿ ಸಿ 2583 ಇವರ ಮೂಲಕ ನಮ್ಮ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದು ಸದ್ರಿ ಸೊತ್ತುಗಳು ಸೀಲು ಮಾಡಲಾಗಿತ್ತು. ಅವುಗಳನ್ನು ತೆರೆದು ನೋಡಲಾಗಿ, ಎ ಎಂದು ಗುರುತಿಸಿದ ವಸ್ತು ಸಂಖ್ಯೆ -1 ರಕ್ತ ಮಿಶ್ರಿ ಹತ್ತಿ, ಬಿ ಎಂದು ಗುರುತಿಸಿದ ವಸ್ತು ಸಂಖ್ಯೆ-2 ರಲ್ಲಿ ಮಾದರಿ ಹತ್ತಿ, ಎಫ್ ಎಂದು ಗುರುತಿಸಿದ ವಸ್ತು ಸಂಖ್ಯೆ -3 ರಲ್ಲಿ ಒಂದು ಚೂರಿ, ಜಿ ಎಂದು ಗುರುತಿಸಿದ ವಸ್ತು ಸಂಖ್ಯೆ-4 ರಲ್ಲಿ ಒಂದು ಅಂಗಿ, ಐ ಎಂದು ಗುರುತಿಸಿದ ವಸ್ತು ಸಂಖ್ಯೆ-5 ರಲ್ಲಿ ಟೀ ಶರ್ಟ್, ಜೆ ಎಂದು ಗುರುತಿಸಿದ ವಸ್ತು ಸಂಖ್ಯೆ 6 ರಲ್ಲಿ ಪ್ಯಾಂಟ್, ಕೆ ಎಂದು ಗುರುತಿಸಿದ ವಸ್ತು ಸಂಖ್ಯೆ-7 ರಲ್ಲಿ ಒಳ ಚಡ್ಡಿ, ಎಲ್ ಮತ್ತು ಎಂ ಎಂದು ಗುರುತಿಸಿದ ವಸ್ತು ಸಂಖ್ಯೆ-8 ಮತ್ತು 9 ರಲ್ಲಿ ಪತ್ಯೇಕ ಟವೆಲ್ ಗಳು ಇದ್ದವು.

2. ಅವುಗಳನ್ನು ಪರೀಕ್ಷೆಗೆ ಒಳಪಡಿಸಿದ್ದು ವಸ್ತು ಸಂಖ್ಯೆ-ಬಿ ಯನ್ನು ಹೊರತುಪಡಿಸಿ ಉಳಿದೆಲ್ಲಾ ವಸ್ತುಗಳಲ್ಲಿ ರಕ್ತದ ಕಲೆಗಳು ಇತ್ತು. ಅವುಗಳನ್ನು ಸೆರಾಲಜಿ ಪರೀಕ್ಷೆಗೆ ಒಳಪಡಿಸಿರುತ್ತೇನೆ.

ವಸ್ತು ಸಂಖ್ಯೆ ಎ, ಎಫ್, ಜಿ, ಐ, ಜೆ, ಕೆ. ಎಲ್ ಹಾಗುಾ ಎಂ ನಲ್ಲಿ ಮಾನವ ಮೂಲದ ರಕ್ತ ಕಂಡುಬಂದಿರುತ್ತದೆ ಹಾಗೂ ಅದು ಎ ಬಿ ಗುಂಪಿಗೆ ಸೇರಿದ ರಕ್ತವಾಗಿರುತ್ತದೆ. ಈ ಬಗ್ಗೆ ಪರೀಕ್ಷಾ ವರದಿಯನ್ನು ನೀಡಿರುತ್ತೇನೆ. ಪರೀಕ್ಷಾ ವರದಿಯನ್ನು ನೋಡುತ್ತಿದ್ದು ನಿಪಿ.61 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.61(ಎ) ಎಂದು ಗುರುತಿಸಲಾಯಿತು. ಮಾದರಿ ಮುದ್ರೆಯನ್ನು ನಿಪಿ.62 ಎಂದು ಗುರುತಿಸಲಾಯಿತು. ರಕ್ತ ಮಿಶ್ರಿತ ಹತ್ತಿ, ಮಾದರಿ ಹತ್ತಿ, ಚೂರಿ ಮತ್ತು ಶರ್ಟ್ ಅನ್ನು ಈಗಾಗಲೇ ಮುದ್ದೆಮಾಲು-1 ರಿಂದ 3 ಮತ್ತು 5 ಎಂದು ಗುರುತಿಸಲಾಗಿದೆ. ನಾನು ಪರೀಕ್ಷೆಗೆ ಒಳಪಡಿಸಿದ ಇತರ ವಸ್ತುಗಳನ್ನು ಈಗ ನೋಡುತ್ತಿದ್ದು, ಟೀ ಶರ್ಟ್ ಅನ್ನು ಮುದ್ದೆಮಾಲು-10 ಎಂದು, ಪ್ಯಾಂಟ್ ಅನ್ನು ಮುದ್ದೆಮಾಲು-11, ಒಳಚಡ್ಡಿಯನ್ನು ಮುದ್ದೆಮಾಲು-12 ಹಾಗುಾ ಟವೆಲನ್ನು ಮುದ್ದೆಮಾಲು-13 ಹಾಗೂ ಎರಡು ಟವೆಲ್ ತುಂಡುಗಳನ್ನು ಮುದ್ದೆಮಾಲು-14 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀ. ಎಂ.ಎಸ್.ಎಸ್. ವಕೀಲರಿಂದ</u>**

ಒಣಗಿದ ರಕ್ತದ ಕಲೆಗಳಾಗಿರುವುದರಿಂದ ರಕ್ತದ ಆರ್ ಎಚ್ ಹೇಳಲು ಬರುವುದಿಲ್ಲ. ರಕ್ತವು ಒಂದು ದಿನ ಕಳೆದರೂ ಸಹಾ ಆರ್ ಎಚ್ ಮಟ್ಟ ಹೇಳಲು ಬರುವುದಿಲ್ಲ. ಪ್ರಾಥಮಿಕ ಪ್ರಯೋಗವನ್ನು ಕೂಡಲೇ ನಡೆಸಿದ್ದು ಕೋವಿಡ್ ಕಾರಣದಿಂದಾಗಿ ಸೆರಾಲಜಿ ಪರೀಕ್ಷೆಗೆ ಒಳಪಡಿಸುವಾಗ ತಡವಾಗಿರುತ್ತದೆ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.